## ನಾಂದಿಪದ

# ಪ್ರೇಮದ ಪರಿಮಳ



ಕಲೆ: ಜಬೀವುಲ್ಲಾ ಎಂ. ಅಸದ್

ಲೋಕದ ದುಗುಡಗಳೊಂದಿಗಿನ ಅನುಸಂಧಾನವೇ ಸಾಹಿತ್ಯದ ಉದ್ದೇಶ ಎನ್ನುವ ನಂಬಿಕೆಯಲ್ಲಿ, ಸಮಕಾಲೀನ ಕನ್ನಡ ಸಾಹಿತ್ಯ ಪ್ರೇಮದಿಂದ ಅಂತರ ಕಾಯ್ದುಕೊಂಡಿರುವಂತಿದೆ. ತರುಣ ತರುಣಿಯರ ಕಥೆ–ಕವಿತೆಗಳಲ್ಲೂ ಪ್ರೇಮದ ಬಿಸುಪು ಎದ್ದುಕಾಣಿಸುವಂತಿಲ್ಲ. ಪ್ರೇಮವೂ ಬದುಕಿನ ಭಾಗ ಎನ್ನುವ ನಂಬಿಕೆ ಇಲ್ಲದೆ ಹೋದರೆ ಸಾಹಿತ್ಯದ ಆರ್ದ್ರತೆ ಅಷ್ಟರ ಮಟ್ಟಿಗೆ ಕಡಿಮೆಯಾಗುತ್ತದೆ. ಜನಪರ ಆಗಬೇಕೆನ್ನುವ ಸಾಹಿತ್ಯದ ಹಂಬಲಕ್ಕೆ ಪ್ರೇಮ ಪೂರಕವಾದುದೇ ಆಗಿದೆ. ಈ ನಂಬಿಕೆಯಲ್ಲಿಯೇ, ಪ್ರೇಮದ ಮೂಲಕ ಬದುಕಿನ ಸಾಧ್ಯತೆಗಳನ್ನು ಧ್ವನಿಸುವ ವಿಶೇಷ ಕಥೆ–ಕವಿತೆಗಳನ್ನು 'ಮಯೂರ'ದ ಈ ಸಂಚಿಕೆ ಒಳಗೊಂಡಿದೆ. ಈ ಬರಹಗಳು ಸೂಸುತ್ತಿರುವ ಪ್ರೇಮದ ಪರಿಮಳ ಜೀವನಸೌಂದರ್ಯದ ಅಭಿವ್ಯಕ್ತಿಯಂತಿವೆ; ಪ್ರೇಮವೆನ್ನುವುದು ನವಿರು ಭಾವವಾಗಿರುವಂತೆ ನೋವಿನಲ್ಲದ್ದಿದ ಹೂವೂ ಹೌದು ಎನ್ನುವುದನ್ನು ಸೂಚಿಸುವಂತಿವೆ.

ಮಲಯಾಳಂ ಸಾಹಿತ್ಯ ದಿಗಂತವನ್ನು ವಿಸ್ತರಿಸಿದ ಎಂ.ಟಿ. ವಾಸುದೇವನ್ ನಾಯರ್ ಅವರ ಜೀವನ–ಸಾಧನೆಯನ್ನು ಪರಿಚಯಿಸುವ ಬರಹ ಹಾಗೂ 'ಕುವೆಂಪು ರಾಷ್ಟ್ರೀಯ ಪುರಸ್ಕಾರ 2024'ಕ್ಕೆ ಪಾತ್ರರಾಗಿರುವ ಗುಜರಾತಿ ಕಥೆಗಾರ್ತಿ ಹಿಮಾಂಶಿ ಶೆಲತ್ ಅವರ ಸಾಹಿತ್ಯ ಸಮೀಕ್ಷೆ ಈ ಸಂಚಿಕೆಯಲ್ಲಿರುವ ಎರಡು ವಿಶಿಷ್ಟ ಬರಹಗಳು. ವಾಸುದೇವನ್ ನಾಯರ್ ಅವರ ಜೀವನ–ಸಾಧನೆಯನ್ನು ಪರಿಚಯಿಸುವ ಬರಹ ಅಗಲಿದ ಅಸಾಧಾರಣ ಬರಹಗಾರನಿಗೆ 'ಮಯೂರ' ಸಲ್ಲಿಸುತ್ತಿರುವ ನುಡಿನಮನವಾದರೆ, ಹಿಮಾಂಶಿ ಅವರ ಸಾಹಿತ್ಯ ಸಮೀಕ್ಷೆ ಸಮಕಾಲೀನ ಬರಹಗಾರರೊಬ್ಬರ ಸಾಧನೆಯನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಪ್ರಯತ್ನವಾಗಿದೆ. ಈ ಇಬ್ಬರೂ ಲೇಖಕರ ಬರಹ ಹಾಗೂ ಆಶಯಗಳು ಯಾವುದೋ ಒಂದು ರೂಪದಲ್ಲಿ 'ಕನ್ನಡ ವಿವೇಕ'ದ ಭಾಗವೇ ಆಗಿರುವುದು, ಸಾಹಿತ್ಯದ ಜೀವಶಕ್ತಿ ಎಲ್ಲೆಡೆಯೂ ಒಂದೇ ರೂಪದಲ್ಲಿರುವುದನ್ನು ಸೂಚಿಸುವಂತಿದೆ. 'ಲಲಿತ ಮಂಟಪ' ಮಾಲಿಕೆಯಲ್ಲಿನ ಕಲಾ ವಿಮರ್ಶಕ ಅಶೀಶ್ ಮೋಹನ್ ಖೋಕರ್ ಅವರ ಸಂದರ್ಶನ ಕಲೆ–ಸಾಹಿತ್ಯ ಹಾಗೂ ಜೀವನದ ನಡುವಿನ ಸೂಕ್ಷ್ಮ ನಂಟಿನ ತಂತನ್ನು ಕಾಣಿಸುವಂತಿದೆ.

'ಮಯೂರ'ದ ಈ ಸಂಚಿಕೆ ಓದುಗರಿಗೆ ಭಿನ್ನರುಚಿಯನ್ನು ನೀಡುತ್ತದೆನ್ನುವ ನಂಬಿಕೆ ನಮ್ಮದು. ನಿಮ್ಮ ಟೀಕೆ–ಟಿಪ್ಪಣಿಗಳು ನಾವು ನಡೆಯಬೇಕಾದ ದಾರಿಯನ್ನು ಇನ್ನಷ್ಟು ನಿಚ್ಚಳಗೊಳಿಸುತ್ತವೆ.

**–ಮಯೂರ ಬಳಗ**

**editormy@mayura.co.in**